ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 64-70
©IIMRD, Mysuru
IIMRD JOURNALS
www.iimrd.com

# ಮೌಖಿಕ ಮಹಾಕಾವ್ಯಗಳಲ್ಲಿ ಭಿಕ್ಷಾಟನೆ: ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳನ್ನು ಅನುಲಕ್ಷಿಸಿ

ಹೇಮಾವತಿ ಬಿ.ಹೆಚ್.[1]

**ಪೀಠಿಕೆ**

ಮೌಖಿಕ ಕಾವ್ಯಗಳಲ್ಲಿ ಮುಖ್ಯವಾಗಿ ಕಂಡುಬರುವ ಅಲೆಮಾರಿಗಳು, ಅರಣ್ಯವಾಸಿಗಳು, ಜನಪದರು ಬುಡಕಟ್ಟು ಸಮುದಾಯಗಳು ಬದುಕುವ ರೀತಿಯೇ ವಿಭಿನ್ನವಾಗಿರುತ್ತದೆ. ಅವರ ಜೀವನದುದ್ದಕ್ಕೂ ಅಲೆಮಾರಿತನ, ಭಿಕ್ಷಾಟನೆ, ಪಶುಪಾಲನೆ ನಿತ್ಯಬದುಕಿನ ಅವಲಂಬನೆಯಾಗಿದೆ. ಸಾಮಾನ್ಯವಾಗಿ ಜನಪದರು ಸ್ವಾಭಿಮಾನಿಗಳು ಮತ್ತು ಶ್ರಮಿಕರು ಆದ್ದರಿಂದಲೇ ಅವರು ಪ್ರತಿಕ್ಷಣ ದುಡಿಯುತ್ತಲೇ ಇರಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ಬದುಕಲು ದುಡಿಮೆ ಅಗತ್ಯ. ಕೀರ್ತನೆಕಾರರು ಹೇಳುವಂತೆ ಎಲ್ಲರೂ ದುಡಿಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ, ಬಸವಣ್ಣನವರ ಕಾಯಕವೇ ಕೈಲಾಸ ಎಂಬ ನೀತಿಗಳು ಮಾನವ ಜೀವನದ ನಿಲುವನ್ನಾಗಿಸಿದೆ. ಆದ್ದರಿಂದ ಪ್ರತಿಯೊಬ್ಬರು ತಮ್ಮದೇ ಆದ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಪ್ರತಿಯೊಂದು ಸಮುದಾಯಗಳೂ ತಮ್ಮದೇ ಆದ ವೃತ್ತಿಯನ್ನು ಆಧರಿಸಿವೆ. ತಮ್ಮ ತಮ್ಮ ಸಾಂಸ್ಕೃತಿಕ ವೀರನ ಅನುಸರಣೆಯಿಂದ ಕೆಲವು ಸಮುದಾಯಗಳು ಇಂದಿಗೂ ತಮ್ಮ ವೃತ್ತಿಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಮೌಖಿಕ ಕಾವ್ಯಗಳಲ್ಲಿ ಬರುವ ಸಾಂಸ್ಕೃತಿಕ ನಾಯಕರುಗಳು ಒಂದೊಂದು ವೃತಿಯನ್ನು ಪಾಲಿಸಿಕೊಂಡು ಬಂದಿರುವರಾಗಿದ್ದಾರೆ.

ಮಲೆಮಾದೇಶ್ವರನು ಭಿಕ್ಷಾಟನೆ ಮತ್ತು ರಾಗಿಬೀಸುವ ಕೆಲಸ ಮಾಡಿಕೊಂಡು ಬಂದಿದ್ದರೆ; ಮಂಟೇಸ್ವಾಮಿ ಭಿಕ್ಷಾಟನೆಯನ್ನು ಅವಲಂಬಿಸಿದ್ದರು. ಉಳಿದಂತೆ ಜುಂಜಪ್ಪ ದನಕರುಗಳನ್ನು ಸಾಕುವ ಹಾಗೂ ಮೈಲಾರಿಯು ಕುರಿಗಳನ್ನು ಸಾಕುವ ಕೆಲಸಗಳನ್ನು ಮಾಡುತ್ತಾ ಜೀವಿಸುತ್ತಿದ್ದರು. ಬೇವಿನಟ್ಟಿ ಕಾಳಮ್ಮ, ದೊಡ್ಡಕ್ಕಜ್ಜಿ, ಮಡಿವಾಳ ಮಾಚಪ್ಪ, ಕೋಮಾಲಿ, ಕೆಂಪಾಚಾರಿ, ಹೊನ್ನಾಟ್ಟಲೇ ಗೌಡ, ಸರಗೂರು ರಾಮವ್ವ ಮೊದಲಾದವರು ಅನೇಕ ಬಗೆಯ ಕೆಲಸಗಳಲ್ಲಿ ತೊಡಗಿರುತ್ತಾರೆ.

ಈ ಎಲ್ಲಾ ಪಾತ್ರಗಳು ದುಡಿಮೆಯಿಂದಲೇ ಪ್ರಾರಂಭವಾಗಿ ದುಡಿಮೆಯಿಂದಲೇ ತಮ್ಮ ಒಕ್ಕಲು ವೀರನಲ್ಲಿ ಮಗ್ನರಾಗುತ್ತಾರೆ. ಇಲ್ಲಿರುವ ಪಾತ್ರಗಳು ಕೆಳವರ್ಗದಿಂದ ಬಂದವಾಗಿದ್ದು ತಮ್ಮದೇ ಆದ ಮೌಲ್ಯಗಳನ್ನು ಉಳಿಸಿಕೊಳ್ಳಲು ಕಾವ್ಯದುದ್ದಕ್ಕೂ ಪ್ರಯತ್ನಿಸುವುದನ್ನು ಕಾಣಬಹುದಾಗಿದೆ.

ಮೌಖಿಕ ಕಾವ್ಯಗಳಲ್ಲಿ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಸಾಂಸ್ಕೃತಿಕ ನಾಯಕರಲ್ಲಿ ಭಿಕ್ಷೆ ಬೇಡುವ (ಸ್ವರೂಪ) ಪ್ರಕ್ರಿಯೆಯನ್ನು ಕಾಣಬಹುದು. ಭಿಕ್ಷಾಟನೆ ಪ್ರಕ್ರಿಯೆ ಲೋಕ ಕಲ್ಯಾಣ

[1] *ಸಂಶೋಧನಾ ವಿದ್ಯಾರ್ಥಿನಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ.*

ಕಾರ್ಯವಾಗಿದೆ. ಸಾಂಸ್ಕೃತಿಕ ನಾಯಕರು ಮಾಡುವ ಭಿಕ್ಷಾಟನೆಯ ಕಥಾ ಹಂದರವೇ ಭಿಕ್ಷೆಯನ್ನು ವಿಭಿನ್ನವಾಗಿ ವ್ಯಕ್ತಪಡಿಸುತ್ತಾರೆ. ನಾಯಕರುಗಳು ಭಿಕ್ಷೆ ಬೇಡತ್ತಾ ಪವಾಡಗಳನ್ನು ಮಾಡುತ್ತಾ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ತೊಡಗಿರುತ್ತಾರೆ. ಕಾವ್ಯಗಳಲ್ಲಿ ಬರುವ ನಾಯಕರು ಒಂದೇ ರೀತಿಯ ಭಿಕ್ಷಾಟನೆಯನ್ನು ಕೈಗೊಂಡಿಲ್ಲ ಒಬ್ಬೊಬ್ಬ ನಾಯಕನು ಒಂದೊಂದು ರೀತಿಯಲ್ಲಿ ಭಿಕ್ಷೆ ಬೇಡುತ್ತಾ ಸಮಾಜದಲ್ಲಿ ಸಮಾನತೆ ಭ್ರಾತೃತ್ವವನ್ನು ಬೆಳೆಸುತ್ತಾರೆ. ಮಲೆಮಾದೇಶ್ವರ ಭಿಕ್ಷೆ ಬೇಡುವ ಪ್ರಕ್ರಿಯೆ ವಿಭಿನ್ನವಾಗಿದ್ದು ತನ್ನ ಒಕ್ಕಲುತನಕ್ಕೆ ಬೇಕಾದ ವ್ಯಕ್ತಿ, ಎಣ್ಣೆ ಎಳ್ಳುಗಳನ್ನು ಭಿಕ್ಷೆ ಬೇಡುತ್ತಾರೆ.

ಮಲೆಮಾದೇಶ್ವರ ಕಾವ್ಯದ ನಾಯಕನಾದ ಮಾದಪ್ಪ ಭಿಕ್ಷಾಟನೆಯನ್ನು ಕೈಗೊಂಡು ಹೀಗೆ ಸಾರುತ್ತಾನೆ.

***"ಭವತಿ ಭಿಕ್ಷಾಂದೇಹಿ***
***ಧರ್ಮಗುರು ಕೋರ್ರ್ಯಾದ ಭಿಕ್ಷೆ***
***ನನ್ನ ಗುರುಧರ್ಮ ಕೋರ್ರ್ಯಾದ ಭಿಕ್ಷೆ"*** [1]

ಮಾದಪ್ಪನು ಶಿವನಿಗೆ ಗುಡಿ ಕಟ್ಟಿಸಬೇಕು ತನ್ನ ಒಕ್ಕಲುಗಳನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಸಮಾಜವನ್ನು ತಿದ್ದಬೇಕು ಎಂಬ ಉದ್ದೇಶದಿಂದ ಭಿಕ್ಷಾಟನೆಯನ್ನು ಕೈಗೊಳ್ಳತ್ತಾನೆ. ಕಾವ್ಯದುದ್ದಕ್ಕೂ ಒಂದಲ್ಲ ಬಂದು ರೀತಿಯಲ್ಲಿ ಭಿಕ್ಷೆಯನ್ನು ಮಾಡತ್ತಾನೆ. ಮಾದಪ್ಪನು ಶಿವನಿಗೆ ಗುಡಿಕಟ್ಟಿಸಬೇಕೆಂಬ ಉದ್ದೇಶದಿಂದ ಡೊಳ್ಳೆಟ್ಟೆ ಜುಂಜಪ್ಪ ಮತ್ತು ಮಲ್ಲಾಜರೆಂಬ ದಂಪತಿಗಳ ಬಳಿ ಭಿಕ್ಷೆ ಬೇಡಲು ಹೋಗುತ್ತಾನೆ. ಈ ದಂಪತಿ ಆಲಂಬಾಡಿಯ ಹದಿನಾರು ಸೀಮೆಯೊಳಗೆ ಆರು ಜನ ಗಂಡುಮಕ್ಕಳು ಆರು ಜನ ಜೀತಗಾರರನ್ನು, ಏಳುಂಡಿ ದನ, ಏಳುಂಡಿ ಕುರಿಗಳನ್ನು ಹೊಂದಿರುತ್ತಾರೆ. ಮಾದಪ್ಪ ಅದರಲ್ಲಿ ಹೋಗಿ ಈ ರೀತಿಯಾಗಿ ಭಿಕ್ಷೆ ಕೇಳುತ್ತಾನೆ.

***"ಕಂಚಿನ ಕಂಸಾಳೆಯನ್ನು ಶಬ್ಧಮಾಡಿ***
***ಹರಾ ಹರಾ ಹರನ ಭಿಕ್ಷೆ***
***ಗುರುಧರ್ಮ ಕ್ವಾರ್ರ್ಯಾದ ಭಿಕ್ಷೆ***
***ಮಲೆಗಳ ಮುನಿಗಳ ಭಿಕ್ಷೆ***
***ತಂದೆ ಕಲ್ಯಾಣ ದೇವರ ಭಿಕ್ಷೆ***
***ತಾಯಿ ಉತ್ರಾಜಮ್ಮನ ಭಿಕ್ಷೆ***
***ಜ್ಯೋತಿ ಲಿಂಗಯ್ಯನ ಭಿಕ್ಷೆ***
***ಜೋಳಿಗೆ ಹಿಡಿದಾತ್ಮನ ಭಿಕ್ಷೆ***
***ನಾಲ್ಕು ಸಾಗರ ಜೋಳಿಗೆ ಭಿಕ್ಷೆ***
***ನಾಲ್ಕು ಬೆತ್ತದ ಭಿಕ್ಷೆ"*** [2]

ನಂತರ ಮಾದಪ್ಪ ಶಿಶುಮಕ್ಕಳನ್ನು ಪಡೆಯುವ ಸಲುವಾಗಿ ಸಂಕಮ್ಮನಿರುವ ಕೊಕ್ಕರ ಬೋನಿಗೆ ಬರುತ್ತಾನೆ. ಸಂಕಮ್ಮ–ನೀಲಯ್ಯ ದಂಪತಿಗಳು ಕೌಟುಂಬಿಕ ಕಲಹಗಳಿಂದ ಬೇರೆ ಮನೆಯಲ್ಲಿದ್ದಾಗ ನೀಲಯ್ಯ ಕುಲ ಪದ್ಧತಿಯಂತೆ ಹೆಜ್ಜೇನು ಬೇಟೆಗೆ ಹೋಗ ಬೇಕಾದ ಸಂದರ್ಭ ಬರುತ್ತದೆ. ಆಗ ನೀಲಯ್ಯ ಸುಂದರವಾಗಿದ್ದ ಸಂಕಮ್ಮನನ್ನು ಅನುಮಾನಿಸಿ ಒಬ್ಬಂಟಿಗಳಾಗಿ ಬಿಟ್ಟು ಹೋಗಲು ಮನಸಾಗದೆ ಅವಳಿಗೆ ವಿವಿಧ ಸಂಕೋಲೆಗಳಿಂದ ಬಂಧಿಸಿ ಹೋಗುತ್ತಾನೆ. ಇಂತಹ ಸಂದರ್ಭದಲ್ಲಿ ಮಾದಪ್ಪ ಅವಳ ಕಷ್ಟ ಪರಿಹರಿಸಿ ಶಿಶುಮಕ್ಕಳು ಪಡೆಯಲು ಭಿಕ್ಷೆಗಾಗಿ ಅಲ್ಲಿಗೆ ಬಂದು ಸಾರುತ್ತಾನೆ.

***"ಬಾರಮ್ಮ ಕಂದ ಮನೆಯೊಳಗೆ***

***ಹರನಿಗೆ ಭಿಕ್ಷಾ ನೀಡವ್ವ***

***ಗುರುವಿಗೆ ದಾನ ನೀಡವ್ವ***

***ಶಿವನಿಗೆ ಧರ್ಮ ನೀಡವ್ವಾ***

***ಮಗಳ ಮುತ್ತೈದೆ ಕೈನ ದಾನ ನೀಡಿ***

***ಮೂಡಲ ಮನೆಗೆ ಕಳುಗವ್ವ"*** ಎಂದು ಭಿಕ್ಷೆಯನ್ನು ದಾನ ಕೇಳುತ್ತಾನೆ.

ಮುಂದೆ ಮಾದಪ್ಪನ ಭಿಕ್ಷಾಟನೆಯ ಶಿಷ್ಟರಕ್ಷೆ ದುಷ್ಟಶಿಕ್ಷೆ ಎಂಬ ಸಮಾಜ ಕಲ್ಯಾಣವನ್ನು ಕಾಣಹುದಾಗಿದೆ. ಮಾದಪ್ಪ ತನ್ನ ಒಕ್ಕಲು ಹೆಚ್ಚಿಸಿಕೊಂಡು ಇಂತಹ ಜನಾಂಗದವರೆ ವಿವಿಧ ಪೂಜಾಕಾರ್ಯಗಳನ್ನು ನಡೆಸಿಕೊಡಬೇಕು ಎಂಬ ಉದ್ದೇಶದಿಂದ ತನಗೆ ಎಣ್ಣೆ ಮಜ್ಜನಕ್ಕೆ ಬೇಕಾದ ಎಳ್ಳಿಗಾಗಿ ಬೇವಿನಟ್ಟಿ ಕಾಳಮ್ಮನ ಬಳಿ ಭಿಕ್ಷೆಗೆ ಬರುತ್ತಾನೆ, ಕೆಂಡೇಗೌಡನ ಹೆಂಡತಿಯಾಗಿದ್ದ ಬೇವಿನಟ್ಟಿ ಕಾಳಮ್ಮ ಎಳ್ಳು ಬೆಳೆಯುವವಳಾಗಿದ್ದು ಬಹಳ ಅಹಂಕಾರಿ ಮತ್ತು ಜಿಪುಣಿಯಾಗಿರುತ್ತಾಳೆ. ಇವಳಿಗೆ ಭಿಕ್ಷೆ ನೀಡುವ ಗುಣವಿಲ್ಲ ಆದರೂ ಮಾದಪ್ಪ ಅವಳಲ್ಲಿಗೆ ಬಂದು ಭಿಕ್ಷೆಬೇಡಿದಾಗ ಕಾಳಮ್ಮ ಬಯ್ಯುವ ರೀತಿ ಅವಳಲ್ಲಿನ ದುರಂಹಕಾರವನ್ನು ಎತ್ತಿ ತೊರಿಸುತ್ತಾರೆ

***"ಭವತಿ ಭಿಕ್ಷಾಂದೇಹಿ***

***ಧರ್ಮ ಗುರು ಕ್ವಾರಣ್ಯದ ಭಿಕ್ಷ ಅಂತೇಳಿ***

***ಜೋರಾಗಿ ಭಿಕ್ಷ ಸಾರುದ್ರು"***

ಆಗ ಕಾಳಮ್ಮ ಭಿಕ್ಷೆ ಎಂಬ ಪದ ಕೇಳುತ್ತಿದ್ದ ಹಾಗೆ ಮಾದಪ್ಪನನ್ನು ಬೈಯುತ್ತಾ

***"ಹೊರಟೋಗು ಜುಂಗುಮಯ್ಯ***
***ಒಳ್ಳೆ ಮಾತ್ನಲ್ಲೆ ಹೋಗು***
***ಇಲ್ಲವಾದರೇ ಬೆಳ್ಳಿ ಕೊಕ್ಕ ಮೆರೆ ಏಟು ಬಿದ್ದಿತು***
***ಓಹೋ ಮಲ್ಲಣ್ಣ***
***ಬೆಳ್ಳಿ ಕೊಕ್ಕ ಮೆರೆಯೆತ್ತಿಡ್ಕಂಡ್ ಬಾ***
***ನನ್ನ ಕಣ್ಣಿನ ರೆಪ್ಪೆ ಎತ್ತು.***[4]

ಈ ಜಂಗಮಯ್ಯನ್ಗೆ ಮೂರು ಏಟು ವಡೆದು ಓಡಿಸ್ತಿನಿ ಎಂದು ಕಠೋರವಾಗಿ ನಡೆದುಕೊಳ್ಳುತ್ತಾಳೆ. ಇಲ್ಲಿ ತನ್ನ ಸ್ವಾಭಿಮಾನವ ಬಿಡದೇ ತನ್ನ ಹಠವನ್ನು ವ್ಯಕ್ತಪಡಿಸುತ್ತಾಳೆ

***"ನೋಡಯ್ಯ ಪರದೇಸಿ ಜಂಗಮ***
***ನನ್ನ ಮುನ್ನೂರು ಮೂವತ್ತು ಕಂಡ್ಗ***
***ಎಳ್ಳಿನ ರಾಸಿಯಲ್ಲಿ***
***ಇಲ್ಲಿ ಬೂದಿರಾಸಿಯಾಗೋದ್ರು ಸರಿಯೇ***
***ನಾನು ದಾನ ಕೊಡುವಂತ ಮಗಳಲ್ಲ***
***ದಾನದ ಕೈ ಬರೋದಿಲ್ಲ"***

***"ನನ್ನ ಗಂಡನಾದ ಕೆಂಡೇಗೌಡ***
***ಮೂಡ್ಲ ಗಿಡುವಿನಲ್ಲಿ***
***ಹಿಂಬೇದಿ ಮುಂಬೇದಿ ಬಂದೂ***
***ಅಲ್ಗೆ ಸತ್ತೊದ್ರು ಸರಿಯೇ.....***
***ನನ್ನ ಏಳು ಜನ ಮೊಮ್ಮಕ್ಕಳ ತಂದು***
***ಬಾಣಗಾರ ಕೆಚ್ಚೆ ಹೊಲದಲ್ಲಿ ಸಾಲ***
***ಸಮಾಧಿ ಮಾಡ್ಬುಟ್ಟು ಪೂಜೆ ಮಾಡ್ಬಿಟ್ಟು ಹೋದ್ರು ಸರಿಯೇ"*** [6] ತಾನು ಮಾತ್ರ ಎಳ್ಳಿನ ಭಿಕ್ಷೆ ನೀಡಲಾರೆ ಎಂದು ಭಿಕ್ಷಾಟನೆಯನ್ನು ವಿರೋಧಿಸುತ್ತಾಳೆ. ಇಲ್ಲಿ ಎಳ್ಳಿನ ಭಿಕ್ಷೆ ಸಾಂಕೇತಿಕವಾದರೂ ಅವಳ ದುರಂಹಕಾರವನ್ನು ಮುರಿದು ತನ್ನ ಒಕ್ಕಲುವನ್ನಾಗಿ ಮಾಡಿಕೊಳ್ಳವ ಉದ್ದೇಶ ಮುಖ್ಯವಾಗಿದೆ. ಕಾಳಮ್ಮನು ತನ್ನ ತನವನ್ನು ಬಿಟ್ಟು ಕೊಡಲು ಒಪ್ಪದ ಅವಳ ಸೊಕ್ಕು ಅಡಗಿಸಬೇಕೆಂದು ಇಡೀ ಸಂಸಾರ ಕುಟುಂಬವನ್ನು ಸುಟ್ಟು ಭಸ್ಮ ಮಾಡುತ್ತಾನೆ. ಮಾದಪ್ಪನಿಗೆ ಭಿಕ್ಷೆ ನೀಡದೆ, ಮಾದಪ್ಪನ ಒಕ್ಕಲಾಗದೇ ಇರುವ ಕಾಳಮ್ಮ ಕೊನೆಗೆ ಮಾದಪ್ಪನಿಂದ ಹತಳಾಗುತ್ತಾಳೆ.

ಮಾದೇಶ್ವರನಂತೆ ಮಂಟೇಸ್ವಾಮಿಯು ಭಿಕ್ಷಾಟನೆಯ ಪರಂಪರೆಯನ್ನೆ ರೂಢಿಸಿಕೊಂಡವಾರಾಗಿದ್ದಾರೆ. ಮಂಟೇಸ್ವಾಮಿಯ ಭಿಕ್ಷಾಟನೆಯು ಭಿನ್ನವಾಗಿದ್ದು, ಭಂಗಿ ಸೇವಿಸುವ ಭೈರಾಗಿಯಾಗಿ ಭಿಕ್ಷೆ ಬೇಡುವ ಸ್ವರೂಪದಲ್ಲಿ ಕಾಣಿಸಿಕೊಂಡಿದ್ದಾರೆ. "ಮಂಟೇಸ್ವಾಮಿ ಕಾವ್ಯದಲ್ಲಿ ಮಂಟೇಸ್ವಾಮಿಯ ತನ್ನ ಒಕ್ಕಲಾದ ರಾಚಪ್ಪಜಿಯ ಭಿಕ್ಷೆಯ ಮುಖಾಂತರ ಗಾರುಡಿಗರಿಂದ ಹಿರೇಚನ್ನಾಜಮ್ಮಳನ್ನು, ಬಸವಾಚಾರಿ ಮತ್ತು ಮುದ್ದಮ್ಮರೆಂಬ ದಂಪತಿಗಳಿಂದ ಮಗನನ್ನೆ ಭಿಕ್ಷೆಯಾಗಿ ಪಡೆಯಲು ಬೆಂಕಿ ಕೆಂಡ ಬೇಕೆಂದು ಕೆಂಪಾಚಾರಿಯಲ್ಲಿ ಕಬ್ಬಿಣದ ಭಿಕ್ಷೆಯನ್ನು ಪಡೆಯಲು ಭಿಕ್ಷೆ ಸಾರುತ್ತಾರೆ". [7]

ಮಂಟೇಸ್ವಾಮಿಯ ತನಗೆ ಕೆಂಪಚಾರಿಯೆಂಬ ಶಿಶುಮಗನನ್ನ ದಾನಪಡೆಯಲು ಮುದ್ದಮ್ಮನ ಬಳಿಗೆ ಹೋಗುತ್ತಾರೆ.

***"ಯಾರವ್ವ ನನ್ನ ಕಂದಾ***
***ಯಾರವ್ವ ನನ್ನ ಮಗಳೇ***
***ಈ ಬಾಳುವ ಮನೆಯಲ್ಲಿ***
***ಅಮ್ಮ ಬದುಕುವ ಮನೆಯಲ್ಲಿ***
***ಮಗಳೆ ವಾಸ ಮಾಡೋರು***
***ಯಾರು ನನ್ನ ಕಂದ***
***ಯಾರವ್ವ ಮುದ್ದಮ್ಮ***
***ಅಯ್ಯೋ ದಾನವೊ ದಾನ***
***ಭಿಕ್ಷವೋ ಭಿಕ್ಷೆ ತಾಯಿ"[8]***

ಎಂದು ಮಂಟೇಸ್ವಾಮಿ ನಯ ವಿನಯವಾಗಿ ಭಿಕ್ಷೆ ಕೇಳುತ್ತಾನೆ. ಆಗ ಮುದ್ದಮ್ಮ ಮಂಟೇಸ್ವಾಮಿಯನ್ನೇ ಕುರಿತು ಹಾಳಾದ ಮಂಟೇದಯ್ಯನೆಂದು ಬಯ್ದು

***"ಲೋ ಎತ್ತಲಿಂದ ಬಂದೊ ನೀನು***
***ಹುಚ್ಚು ಕಾಡ ಪರದೇಶಿ***
***ಭಿಕ್ಷವ ಮಾಡವನೆ***
***ಲೋ ತರ್ಕಂಡು ತಿನ್ನವನೇ***
***ಬೂದು ಬಡಕ ಕೇಳೊ***
***ಈ ಭಿಕ್ಷೆ ಮಾಡೋ ಮುಂಡೆ ಮಕ್ಕಳಗೇ ಹೊತ್ತುಗೊತ್ತು ಒಂದೂ ಇಲ್ವ"[9]***

ಎಂದು ಬಯ್ಯುತ್ತಾ ಭಿಕ್ಷುಕರಿಗೆ ಭಿಕ್ಷೆ ಹಾಕುವುದರ ಬಗ್ಗೆ ಬೇಸರವನ್ನೆ ವ್ಯಕ್ತಪಡಿಸುತ್ತಾ ಮಂಟೇಸ್ವಾಮಿಯನ್ನೇ ಬಯುತ್ತಾ

***"ಭಿಗಸ ಭಿಗಸ ಅಂತೇಳಿ***
***ಈ ಭಿಕ್ಷುಕರು ನಮ್ಮ ಮನೆಗೆಯೆ ಬರ್ತಾರಲ್ಲ***
***ಈ ಭಿಕ್ಷೆ ಮಾಡುವಂತ ಮುಂಡೇ***
***ಮಕ್ಕಳಿಗೆ ಎದ್ದಗಳಿಗೇಲೆ ಇವರು ಮೊಖ ನೋಡಬೇಕಲ್ಲ***

***ಈ ಪರದೇಶಿಗಳಿಗೆ ಎಷ್ಟು ಸಾರಿ ಭಿಕ್ಷೆ ಕೊಟ್ಟು ಕಳುಗಬೇಕು"[10]*** ಎಂದು ನಿಷ್ಟುರವಾಗಿ ಬಯ್ಯುತ್ತಾಳೆ. ಆದರೆ ಮಂಟೇಸ್ವಾಮಿ ಅತ್ಯಂತ ಗೌರವ ವಿನಯದಿಂದಲೇ ಮುದ್ದಮ್ಮನ ಬಳಿ ಅವಳ ಹೆತ್ತ ಮಗನನ್ನು

ಭಿಕ್ಷೆಯಾಗಿ ನೀಡಬೇಕೆಂದು ಕೇಳುತ್ತಾನೆ. ಆದರೆ ಮುದ್ದಮ್ಮ ಇದನ್ನು ತಿರಸ್ಕರಿಸಿ ಖಡಾ ಖಂಡಿತಾವಾಗಿ ಮಗನನ್ನು ಭಿಕ್ಷೆಯಾಗಿ ನೀಡುವುದಿಲ್ಲವೆಂದು ಹೇಳಿ ಕಳುಹಿಸುತ್ತಾಳೆ.

ಮುದ್ದಮ್ಮನ ಮಗ ಕೆಂಪಾಚಾರಿಯನ್ನ ದಾನವಾಗಿ ಕೇಳಿ ಅವಳು ನೀಡದಿದ್ದಾಗ ಮಂಟೇದಯ್ಯ ನೇರವಾಗಿ ಕೆಂಪಾಚಾರಿ ಕೆಲಸ ಮಾಡುವ ಕುಲುಮೆಯ ಹತ್ತಿರ ಹೋಗಿ ಭಿಕ್ಷೆ ಕೇಳುತ್ತಾನೆ. ಆಗ ಕೆಂಪಾಚಾರಿ ತಾತ್ಸಾರದಿಂದ

***"ಈ ಭಿಕ್ಷೆ ಮಾಡೋ ಮುಂಡೆ ಮಕ್ಕಳ***

***ಮೊಕಾ ನಾನು ನೋಡುಬಾರ್ದು***

***ಈ ತಂಬೂರಿ ಬಾರ್ಸವರ***

***ಮೊಕವನ್ನು ನೋಡಿದರೆ***

***ಈ ಭಿಕ್ಷಕರ ನೋಡಿದ್ರೇ***

***ಬಾಳಕ್ಯಾಪ ಆಗುತ್ತದೆ"*** [11] ಇಲ್ಲಿ ಮಂಟೇಸ್ವಾಮಿ ಕೆಂಪಾಚಾರಿಯನ್ನೆ ತನ್ನ ಒಕ್ಕಲನ್ನಾಗಿ ಮಾಡಿಕೊಳ್ಳಲು ಕೆಂಪಚಾರಿಗೆ ವಿವಿಧ ಪರೀಕ್ಷೆಗಳನ್ನು ನೀಡಿ ಕೊನೆಗೆ ಅವನನ್ನು ಭಿಕ್ಷೆಯಾಗಿ ಪಡೆಯುತ್ತಾನೆ.

ಮಂಟೇಸ್ವಾಮಿ ಕಾವ್ಯದಲ್ಲಿ ಭಿಕ್ಷೆ ನೀಡುವ ಸಂದರ್ಭದಲ್ಲಿ ಮಂಟೇಸ್ವಾಮಿಯ ಅನೇಕ ನಿಷ್ಠುರ ಮಾತುಗಳು ಬಯ್ಗುಳಗಳು ಕಠೋರ ಮಾತುಗಳನ್ನು ಕೇಳಿದರೆ ಬೋಪ್ಪಗೌಡನಿರುವ ಬೊಪ್ಪನಪುರದಲ್ಲಿ ತನಗೆ ಮಠದ ಮನೆ ಭಿಕ್ಷೆ ಬೇಕೆಂದು ಸಾರುತ್ತಾ ಬಂದಾಗ ಬೊಪ್ಪಗೌಡನು ವಿನಯದಿಂದಲೇ ದಾನ ಕೊಡುತ್ತಾರೆ. ಆದರೆ ತಾನು ದಾನ ಮಾಡುವ ಸಂದರ್ಭವನ್ನು ವಿವರಿಸುವ ರೀತಿ ಸೊಗಸಾಗಿದೆ. ಅಂದರೆ ಬೊಪ್ಪಗೌಡನು ಭಿಕ್ಷೆ ನೀಡುವ ಸಮಯ ಬೆಳಗಿನ ಜಾವದಲ್ಲಿ ಮಾತ್ರ ಆಗಿರುತ್ತದೆ ಸಂಜೆ ಬಂದವರಿಗೆ ದಾನ ಭಿಕ್ಷೆ ನೀಡುವುದಿಲ್ಲ ಎಂಬುದನ್ನು ಹೇಳುತ್ತಾ

***"ನಿಮ್ಮಂತ ಭಿಕ್ಷುಕರಿಗೆ ಜಾಗ ಕೊಟ್ಬುಟ್ರೆ***

***ನೀವು ನೀಡ್ದ ಕಾಲ ತೆಗಿಯದಿಲ್ಲ***

***ಮುಚ್ಚಿದ ಕಣ್ಣ ಬಿಡುವುದಿಲ್ಲ***

***ನೀವು ಕೋಳಿ ಕೂಡಿ ಬೆಳಕರುದ್ರು ನೀವು***

***ಮಲಗಿದ್ದು ಮ್ಯಾಕೆ ಏಳಾದಿಲ್ಲ***

***ನೀವು ಮನಿಕಂಡು ನಿದ್ರೆ ಮಾಡುವ ಕಾಲದಲ್ಲಿ***

***ನಮ್ಮ ಮಡದಿ ಮಕ್ಕಳು***

***ನಮ್ಮ ಸೊಸೆರು ಗಂಡುಮಕ್ಕಳು ಏನಾರ ನಮ್ಮ ನೋಡಿಬುಟ್ರೆ"*** [12]

ಎಂದು ಹೇಳುತ್ತಾರೆ. ಬೊಪ್ಪಗೌಡನ ಮಾತಿನಲ್ಲಿ ಸಮಾಜದಲ್ಲಿ ಭಿಕ್ಷುಕರಿಗೆ ಇರುವ ಸ್ಥಾನವನ್ನು ನೋಡುಬಹುದು ಆದರೆ ಮಂಟೇಸ್ವಾಮಿ ಸಮಾಜ ಕಲ್ಯಾಣ ಮಾಡಲು ಭಿಕ್ಷೆ ಬೇಡುವವನಾಗಿ ಬಂದಿದ್ದು ಎಂಬುದು ಅರಿವಾಗಿ ಮಠದ ಮನೆಯನ್ನು ಭಿಕ್ಷೆಯಾಗಿ ನೀಡುತ್ತಾರೆ.

**ಉಪಸಂಹಾರ**

ಹೀಗೆ ಮೌಖಿಕ ಕಾವ್ಯಗಳಲ್ಲಿ ಮುಖ್ಯವಾಗಿ ಭಿಕ್ಷಾಟನೆಯ ಪ್ರಕ್ರಿಯೆ ಕಾವ್ಯಗಳಲ್ಲಿ ಒಂದು ಸಮುದಾಯಗಳ ನೇತಾರರಾಗಿರುವ ಸಾಂಸ್ಕೃತಿಕ ವೀರರು ಭಿಕ್ಷಾಟನೆಯನ್ನು ಮಾಡುತ್ತಿವುದುನ್ನು ಕಾಣಬಹುದಾಗಿದೆ. ಕೆಲವು ಸಾಂಸ್ಕೃತಿಕ ವೀರರು ಭಿಕ್ಷೆ ಬೇಡುತ್ತಲೇ ಒಕ್ಕಲುತನವನ್ನು ಹೆಚ್ಚಿಸಿಕೊಂಡಿರುತ್ತಾರೆ. ಭಿಕ್ಷೆ ಬೇಡುವ ಪದ್ಧತಿ ಎಲ್ಲಾ ಧರ್ವಗಳಲ್ಲಿಯೂ ಇದೆ. ಅನಾದಿಕಾಲದಿಂದಲೂ ಭಿಕ್ಷೆ ಬೇಡುವ ಪರಂಪರೆ ಇದ್ದು ಕಾವ್ಯಗಳಲ್ಲಿ ಭಿಕ್ಷೆ ಬೇಡುವ ಪ್ರಕ್ರಿಯೇ ವಿಶಿಷ್ಟತೆಯಿಂದ ಕೂಡಿದೆ. ಕಾವ್ಯದ ನಾಯಕರು ಭಿಕ್ಷೆ ಬೇಡುವ ಪರಿ, ಉದ್ದೇಶವೂ ಸರ್ವಕಾಲಿಕವಾದದ್ದಾಗಿದೆ. ಏಕೆಂದರೆ ಈ ನಾಯಕರು ಭಿಕ್ಷೆ ಬೇಡುತ್ತಾ ಜನಸಾಮಾನ್ಯರನ್ನು ಪರೀಕ್ಷಿಸಿ ತಿದ್ದಿ ಶಿಕ್ಷಿಸಿ ರಕ್ಷಿಸಿ ತಮಗೆ ಅಗತ್ಯವಿರುವಂತಹ ಜನರನ್ನು ಒಕ್ಕಲನ್ನಾಗಿ ಪಡೆಯುತ್ತಾರೆ. ನಾಯಕರು ಭಿಕ್ಷೆ ಬೇಡುವುದರ ಜೊತೆಗೆ ಜನರ ಜೀವನದೊಂದಿಗೆ ಅವಿನಾಭಾವ ಸಂಬಂಧ ಬೆಸೆಯುತ್ತಾರೆ.

**ಕೊನೆಟಿಪ್ಪಣಿ**

---

[1] ಕೇಶವನ್ ಪ್ರಸಾದ್. (1997). ಮಲೆಮಾದೇಶ್ವರ. ಬುಡಕಟ್ಟು ಕಾವ್ಯಮಾಲೆ, ಪ್ರಸರಾಂಗ, ಹಂಪಿ ವಿವಿ. ಹಂಪಿ. ಪು.ಸಂ–313

[2] ಅದೇ., ಪು.ಸಂ. 75

[3] ಅದೇ., ಪು.ಸಂ. 214

[4] ಅದೇ., ಪು.ಸಂ. 342

[5] ಅದೇ., ಪು.ಸಂ. 347

[6] ಅದೇ., ಪು.ಸಂ. 343

[7] ಲಕ್ಷ್ಮಿ ನರಸಮ್ಮ. ಕನ್ನಡ ಜನಪದ ಮಹಾಕಾವ್ಯಗಳು: ಒಂದು ತೌಲನಿಕ ಅಧ್ಯಯನ, ಅಪ್ರಕಟಿತ ಪ್ರೌಢಪ್ರಬಂಧ, ಕನ್ನಡ ವಿವಿ. ಹಂಪಿ., ಪು.ಸಂ. 192

[8] ಹಿ.ಚಿ ಬೋರಲಿಂಗಯ್ಯ. (1997). ಮಂಟೇಸ್ವಾಮಿ, ಬುಡಕಟ್ಟು ಕಾವ್ಯಮಾಲೆ, ಪ್ರಸರಾಂಗ, ಹಂಪಿ ವಿವಿ. ಹಂಪಿ. ಪು.ಸಂ. 309

[9] ಅದೇ., ಪು.ಸಂ. 314

[10] ಅದೇ., ಪು.ಸಂ. 315

[11] ಅದೇ., ಪು.ಸಂ. 346

[12] ಅದೇ., ಪು.ಸಂ. 239